Representation reg. affiliation to two medical Colleges in Bangalore

SRI S. R. BOMMAI.— I am raising the matter regarding the affiliation to two Colleges because of urgency. The ordinance will lapse by midnight to-day. Unless the Government issues an order o affiliation to the Kempegowda Medical College and Dr. Ambedkar Medical College, it will not be in position to give affiliation to these colleges. The provision of law is like that. ಕಾನೂನಿನಲ್ಲಿ ಏನಿದೆ ಎಂದರೆ ಈ ಆರ್ಡಿನೆನ್ಸ್‌ಗೆ ಎಲ್ಲಿಯವರೆಗೆ ಅಧಿಕಾರ ಇರುತ್ತದೋ ಅದರೊಳಗೇ ಮಾಡಿದರೆ ಬರುತ್ತದೆ, ಇದನ್ನು ಯೂನಿವರ್ಸಿಟಿ ಆಕ್ಟ್ ಒಳಗೆ ಮಾಡಿದರೆ ಅದನ್ನು ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಆಗಿ ಕೊಡುವುದಕ್ಕೆ ಬರುವುದಿಲ್ಲ. ಒಟ್ಟಿನಲ್ಲಿ ಈಗ ಯಾರಿಗೆ ಕಾಲೇಜುಗಳಿಗೆ ಹೇಗಾದರೂ ಅಫಿಲಿಯೇಷನ್ ಕೊಟ್ಟಿದ್ದೀರಾ, ಅದೇ ರೀತಿಯಾಗಿ ಈ ಎರಡು ಕಾಲೇಜುಗಳನ್ನು ಕೊಡುತ್ತೇವೆಂದು ಡಿಕ್ಲೇರ್ ಮಾಡಿದ್ದೀರಾ. ಈವೊತ್ತೇ ಅದಕ್ಕೆ ಅಫಿಲಿಯೇಷನ್ ಕೊಡಬೇಕು ಹಾಗೆ ಕೊಡದೇ ಹೋದರೆ ಮುಂದೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಆರ್. ಗುಂಡೂರಾವ್.— ಕೊಡೋಣ ಬಿಡಿ. ಕೊಡುತ್ತೇವೆ ಎಂದರೆ ಆಲ್ಲಿಗೆ ಮುಗಿಯಿತಲ್ಲಾ.

ಶ್ರೀ ಎಸ್. ಆರ್. ಬೊಮ್ಮಾಯಿ.— ಈವೊತ್ತು ರಾತ್ರಿಯೊಳಗೆ ಕೊಡಬೇಕು.

ಶ್ರೀ ಆರ್. ಗುಂಡೂರಾವ್.— Alright. ಆಗಲಿ ಕೊಡೋಣ ಬಿಡಿ. ನೀವೆಲ್ಲಾ ಹೇಳಬೇಕಾದರೆ ನಾವು ಬಿತಕ್ಕೆ ಬೇಡ ಅನ್ನೋಣ. When we have committed we stand by that. We will give affiliation.

ಶ್ರೀ ಹೆಚ್. ಡಿ. ದೇವೇಗೌಡ.— ತಾವೇನು ಆಗಲಿ ಅಂತ ಹೇಳಿದಿರಿ. ಇದರಲ್ಲಿರುವ ಪ್ರಶ್ನೆ ಏನೆಂದರೆ ಪೂನಾ ಬೊಮ್ಮಾಯಿಯವರು ಏನು ಹೇಳಿದರು ಎಂದರೆ ಈಗಾಗಲೇ ಒಂದು ಕಾಲೇಜಿನಲ್ಲಿ ಆಡ್ಮಿಷನ್ ತೆಗೆದುಕೊಂಡು ನಡೆಸುತ್ತಿದ್ದಾರೆ, ಅದಕ್ಕೆ ಅಫಿಲಿಯೇಷನ್ ಈವೊತ್ತು ರಾತ್ರಿ ಇಷ್ಯೂ ಮಾಡದೇ ಹೋದರೆ ಒಂದು ವೇಳೆ ನಾಳೆ ಇಷ್ಯೂ ಮಾಡಿದರೆ ಏನಾಗುತ್ತದೆ ಎಂದರೆ ರೆಟ್ರಾಸ್ಪೆಕ್ಟೀವ್ ಎಫೆಕ್ಟ್‌ಗೆ ಬರುವುದಿಲ್ಲ ಮತ್ತು ಈಗ ಇರತಕ್ಕಂಥಾ ಯೂನಿವರ್ಸಿಟಿ ಆಕ್ಟ್‌ನ ಚೌಕಟ್ಟಿನಲ್ಲಿ ಕೊಡುವುದಕ್ಕಾಗುವುದಿಲ್ಲ ಮತ್ತು ಈಗ ಇದರ ಬಗ್ಗೆ ಆರ್ಡಿನೆನ್ಸ್ ಏನು ಇದೆ ಈ ನಂಜೆ ಒಳಗೆ ಇಷ್ಯೂ ಮಾಡದೇ ಹೋದರೆ ಅದರಿಂದ ಇದಕ್ಕೆ ಲಾಭವೂ ಆಗುವುದಿಲ್ಲ.

ಶ್ರೀ ಆರ್. ಗುಂಡೂರಾವ್.— ನಿಮಗೆ ಏನೂ ತೊಂದರೆಯಾಗುವುದಿಲ್ಲ ಬಿಡಿ.

ಶ್ರೀ ಹೆಚ್. ಡಿ. ದೇವೇಗೌಡ.— ಈವೊತ್ತು ರಾತ್ರಿ ಒಳಗೆ ಇಷ್ಯೂ ಮಾಡದೇ ಹೋದರೆ ಸ್ವಲ್ಪ ತೊಂದರೆಯಾಗುತ್ತದೆ.

ಶ್ರೀ ಆರ್. ಗುಂಡೂರಾವ್.— ಒಂದು ವೇಳೆ ಇಷ್ಯೂ ಆಗದೇ ಹೋದರೂ ಕೂಡ ನಿಮಗೇನೂ ತೊಂದರೆಯಾಗುವುದಿಲ್ಲ ಬಿಡಿ. ನಿಮಗೆ ಯಾವ ರೀತಿಯಾಗಿಯೂ ತೊಂದರೆಯಾಗುವುದಿಲ್ಲ ಪೆದರಬೇಡಿ.

SRI H. D. DEVEGOWDA.— There is some problem.

ಶ್ರೀ ಆರ್. ಗುಂಡೂರಾವ್.— ಯಾವ ರೀತಿಯಾಗಿಯೂ ತೊಂದರೆಯಾಗುವುದಿಲ್ಲ. ನೀವೇನೂ ಪರಿ ಮಾಡಿಕೊಳ್ಳಬೇಡಿ There is no problem because the Government has always got power. You need not worry about it. When we have given permission to these two colleges and when the Government is committed, the Government has always power to over rule and give. There is no worry at all. In the normal course itself we can give it.